ಕಾರ್ಯಕ್ರಮಗಳ ಶೆಡ್ಯೂಲಿಂಗ್ ಲಿಸ್ಟ್ ಕೊಟ್ಟು, ಸರಿಯಾಗಿ 12.30ರ ಲಂಚ್ ಬ್ರೇಕ್ ಸಮಯದಲ್ಲಿ ವ್ಯಾಸರಾವ್ ಬಳಿಗೆ ಹೋಗುತ್ತಿದ್ದೆವು. ಆಗ ಆತ ಬಾಪ್ಪ ಅಂತ ಮಾತನಾಡಿಸಿ, ಮನೆಯಿಂದ ತಂದಿದ್ದ ಊಟದ ಡಬ್ಬಿ ಬಿಟ್ಟು ನಮ್ಮ ಜತೆ ತಿಂಡಿ–ಕಾಫಿಗೆ ಬರುತ್ತಿದ್ದ. ಹೀಗೆ ನನ್ನ ಮತ್ತು ವ್ಯಾಸನ ಒಡನಾಟ ಆರಂಭವಾಯಿತು.

ನಿಜ ಹೇಳಬೇಕೆಂದರೆ ನಮ್ಮಿಬ್ಬರ ಬಾಂಧವ್ಯ ಸರಿಯಾಗಿ ಶುರುವಾಗಿದ್ದು 80ರಲ್ಲಿ. ಆಗಷ್ಟೇ ನಾನು ಪೂರ್ಣಪ್ರಮಾಣದಲ್ಲಿ ನಿರ್ದೇಶನದಲ್ಲಿ ತೊಡಗಿಕೊಂಡಿದ್ದೆ. ನನ್ನದೇ ಅಂತ ಒಂದು ಆತ್ಮೀಯರ ತಂಡ ಮಾಡಿಕೊಂಡಿದ್ದೆ. ಅದರಲ್ಲಿ ಕವಿಗಳಾದ ದೊಡ್ಡರಂಗೇಗೌಡರು, ಬಿ.ಆರ್. ಲಕ್ಷ್ಮಣರಾವ್, ದಲಿತಕವಿ ಸಿದ್ದಲಿಂಗಯ್ಯ ಮತ್ತು ಎಂ.ಎನ್. ವ್ಯಾಸರಾವ್ ಇದ್ದರು. ನಾನು ಯಾವುದೇ ಸಿನಿಮಾ ಮಾಡಲಿ ಈ ನಾಲ್ವರಲ್ಲಿ ಒಬ್ಬರ ಕವನವಾದರೂ ಇರುತ್ತಿತ್ತು. ನಗರ ಜೀವನದ ಕಲ್ಪನೆ ಭಾವನೆಗಳಿಗೆ ವ್ಯಾಸ ಹೆಚ್ಚು ಒತ್ತು ಕೊಟ್ಟು ಬರೆಯುತ್ತಿದ್ದ. ಈ ರೀತಿಯ ಸಿನಿಮಾಗಳನ್ನು ಮಾಡಿದಾಗಲೆಲ್ಲಾ ನಾನು ವ್ಯಾಸನ ಬಳಿ ಕವನಗಳನ್ನು ಕೇಳಿದ್ದೇನೆ. ‘ಆಸ್ಫೋಟ’, ‘ಪ್ರೇಮಯುದ್ಧ’ದಿಂದ ಹಿಡಿದು ಇತ್ತೀಚಿನ ‘ವಸುಂಧರಾ’ದ ತನಕ ಅವನಿದ್ದಾನೆ.

ಅಷ್ಟೊಂದು ಆಪ್ತನಾಗಿದ್ದ, ನನ್ನ ಬಹುತೇಕ ಸಿನಿಮಾಗಳಿಗೆ ಕವಿತೆ ಬರೆದುಕೊಟ್ಟಿದ್ದ ನನ್ನೀ ಗೆಳೆಯನ ಬಗ್ಗೆ ನನಗೊಂದು ರಿಗ್ರೆಟ್ ಮಾಡುವ ಸಂದರ್ಭವಿದೆ. ಅದುವೇ ‘ಗೀತ ಮಾಧುರಿ’ ಕಾರ್ಯಕ್ರಮ. ಇದನ್ನು ದೂರದರ್ಶನಕ್ಕಾಗಿ ಮಾಡಿಕೊಟ್ಟಿದ್ದೆ. ನನ್ನ ಮತ್ತು ವ್ಯಾಸನ ಸಮಕಾಲೀನರಾದ ಬಹುತೇಕ ಕವಿಗಳ ಕವನಗಳು ‘ಗೀತಮಾಧುರಿ’ಯಲ್ಲಿವೆ. ಆದರೆ, ವ್ಯಾಸನ ಕವನಗಳನ್ನು ಹೊರತುಪಡಿಸಿ. ಅದು ಹೇಗೆ ಬಿಟ್ಟು ಹೋಯಿತೋ ನನಗೆ ಅರ್ಥವೇ ಆಗಲಿಲ್ಲ. ಗೀತಮಾಧುರಿಯ ಪರಿಕಲ್ಪನೆ ಎಚ್.ಎಸ್. ವೆಂಕಟೇಶ ಮೂರ್ತಿ, ಬಿ.ಆರ್. ಲಕ್ಷ್ಮಣರಾವ್ ಅವರದ್ದಾಗಿದ್ದರೆ, ಸಂಗೀತ ಸಿ. ಅಶ್ವತ್ಥ ಅವರದಾಗಿತ್ತು. ದೃಶ್ಯ ಪರಿಕಲ್ಪನೆ ನನ್ನದಾಗಿತ್ತು. ಇತ್ತೀಚೆಗೆ ಗೀತಮಾಧುರಿಯನ್ನು ಕೇಳಿಸಿಕೊಂಡಾಗ ಅದರಲ್ಲಿ ವ್ಯಾಸನೇ ಇಲ್ಲವಲ್ಲ ಅಂತ ರಿಗ್ರೆಟ್ ಶುರುವಾಯಿತು. ವ್ಯಾಸ ಯಾಕೆ ಮಿಸ್ ಆದ ಅಂತ ನೆನಪಿಸಿಕೊಂಡರೆ ಬಹುಶಃ ಅಶ್ವತ್ಥ ವ್ಯಾಸನ ಮೇಲೆ ಮುನಿಸಿಕೊಂಡಿದ್ದಿರಬಹುದು ಅಂತ ಕಾಣುತ್ತೆ.

ಇಷ್ಟೆಲ್ಲಾ ಆದರೂ ವ್ಯಾಸ ಎಂದಿಗೂ ಇದನ್ನು ನನ್ನ ಬಳಿ ಪ್ರಶ್ನೆ ಮಾಡಲಿಲ್ಲ. ಅವನ ಸ್ವಭಾವವೇ ಹಾಗಿತ್ತು. ಅವನು ಎಂದಿಗೂ ತನಗಾದ ನೋವು ಹೇಳಿಕೊಳ್ಳಲಿಲ್ಲ. ಎಲ್ಲವನ್ನೂ ಮೀರಿದವನಾಗಿಬಿಟ್ಟಿದ್ದ. ಒಂದು ಕಾಲದಲ್ಲಿ ನನಗೆ ಮಧ್ಯಾಹ್ನದ ಊಟ ಹಾಕಿದವ, ನನ್ನೆಲ್ಲಾ ಸಿನಿಮಾಗಳಿಗೆ ಕೆಲಸ ಮಾಡಿದವ ಎಂದಿಗೂ ತನಗಾದ ನೋವನ್ನು ಹೇಳಿಕೊಳ್ಳಲೇ ಇಲ್ಲ.

ಕರ್ನಾಟಕ ಚಲನಚಿತ್ರ ಅಕಾಡೆಮಿಗೆ ನಾನು ಸ್ಥಾಪಕ ಅಧ್ಯಕ್ಷನಾಗಿದ್ದಾಗ ಇಬ್ಬರೂ ತುಂಬಾ ಪ್ರಯಾಣಿಸುತ್ತಿದ್ದೆವು. ಎಲ್ಲಾ ಸದಸ್ಯರಿಗಿಂತ ಅದ್ಭುತವಾದ ಬೆಂಬಲ ನನಗೆ ಕೊಟ್ಟಿದ್ದ ಅವ. ಹೀಗೆ ಒಮ್ಮೆ ಪ್ರಯಾಣದಲ್ಲಿದ್ದಾಗ ಮಧ್ಯಾಹ್ನದೊತ್ತು ಒಂದು ಕಡೆ ಊಟ ಮಾಡುವಾಗ ಅವನು ಇದ್ದಕ್ಕಿದ್ದಂತೆ ಒಂದು ಇಂಜೆಕ್ಷನ್ ತಗೊಂಡ. ಏನೋ ಇದು ಅಂದರೆ, ಅಯ್ಯೋ ಶುಗರ್‌ಗೆ ಹತ್ತು ವರ್ಷಗಳಿಂದ ತಗೋತಾ ಇದೀನಿ ಕಣೋ ಅಂದ. ನನಗಂತೂ ಪರಮಾಶ್ಚರ್ಯವಾಗಿತ್ತು. ಅರೆ ಇಷ್ಟು ಕಾಲ ಒಟ್ಟಿಗಿದ್ದರೂ ಅವನಿಗೆ ಸಕ್ಕರೆ ಕಾಯಿಲೆ ಬಂದಿರುವ ವಿಚಾರ ನನಗೆ ಗೊತ್ತೇ ಇರಲಿಲ್ಲ. ಅವನೂ ಹೇಳಿಕೊಂಡಿರಲಿಲ್ಲ. ನಮ್ಮ ವ್ಯಾಸ ಇದ್ದಿದ್ದೇ ಹೀಗೆ!

ಚಲನಚಿತ್ರ ಅಕಾಡೆಮಿಗಾಗಿ ನಾನು ಏನೆಲ್ಲಾ ಯೋಚನೆ, ಯೋಜನೆ ಮಾಡಿದ್ದೇನೋ